18. ಗಮನ ಸೆಳೆಯುವ ಸೂಚನೆ.

ವಿಷಯ:– ಮಳವಳ್ಳಿಯಲ್ಲಿರುವ Telecom Employees Co-operative Housing Societyಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ

ಡಾ: ಕೆ.ಅನ್ನದಾನಿ (ಮಳವಳ್ಳಿ):– ಮಾನ್ಯ ಅಧ್ಯಕ್ಷರೇ, ತಮಗೆ ಮೊದಲಿಗೆ ಧನ್ಯವಾದಗಳನ್ನು ಹೇಳುತ್ತಾ ಈ Telecom Employees Co-operative Housing Society ಯಲ್ಲಿ ನಡೆದಿರುವ ಅವ್ಯವಹಾರದ ಹಾಗು green belt ಗಳಲ್ಲಿ ಬಡಾವಣೆಗಳನ್ನು ನಿರ್ಮಾಣ ಮಾಡಿ ಈ ಸೊಸೈಟಿಯ ಪದಾಧಿಕಾರಿಗಳು ಆ ಸದಸ್ಯರಿಗೆ ಹಂಚಿಕೆ ಮಾಡಿ ವಂಚಿಸುತ್ತಿರುವ ಬಗ್ಗೆ ಸರ್ಕಾರ ಸಂಪೂರ್ಣವಾಗಿ ಉತ್ತರ ಕೊಡಬೇಕೆಂದು ಸದನದ ಮೂಲಕ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಉಪಾಧ್ಯಕ್ಷರು:– ಸಹಕಾರ ಸಚಿವರು ಸದನದಲ್ಲಿಲ್ಲ. ಅವರು ಈಗ ಬರುತ್ತಾರೆ. ಬಂದ ಮೇಲೆ ಉತ್ತರ ಕೊಡುತ್ತಾರೆ.

ಡಾ: ಕೆ.ಅನ್ನದಾನಿ:– ಯಾರು ಉತ್ತರ ಕೊಡುತ್ತಾರೆ? ಮಾನ್ಯ ಅಧ್ಯಕ್ಷರೆ, Housing Society ಸುಮಾರು ಇಲ್ಲಿಯವರೆಗೆ ಬೆಂಗಳೂರು ಸುತ್ತ ಮುತ್ತ, ಬೆಂಗಳೂರಿನಲ್ಲಿ 14 ಬಡಾವಣೆಗಳನ್ನು ನಿರ್ಮಾಣ ಮಾಡಿದೆ. 14 ಬಡಾವಣೆಗಳನ್ನು ನಿರ್ಮಾಣ ಮಾಡಿ, ಆ ಎಲ್ಲಾ ಬಡಾವಣೆಗಳಲ್ಲೂ ಕೂಡ ನರ್ಮಾಣ ಮಾಡಿದಂಥ ಸಂದರ್ಭದಲ್ಲಿ ಸಾವಿರಾರು ಸದಸ್ಯರುಗಳು..

ಉಪಾಧ್ಯಕ್ಷರು: statement ಮಾಡಿದ್ದಾರೆಯೇ? ಒಂದು ಗಮನ ಸೆಳೆಯುವ ಸೂಚನೆ 2–3 ದಿವಸಗಳಿಂದ repeat ಆಗಿ ಬರುತ್ತಿದೆ... ಅನ್ನದಾನಿಯವರೇ, ಸಹಕಾರ ಸಚಿವರು ಬಂದ ಮೇಲೆ ಕೇಳಿ. ಈಗ ಶಿಕ್ಷಣ ಸಚಿವರು, Education bill ತೆಗೆದುಕೊಳ್ಳಬೇಕೆ?

ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಅನ್ನದಾನಿಯವರು ಪ್ರಸ್ತಾಪಿಸಿರುವಂಥ ಪ್ರಶ್ನೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ತರಿಸಿಕೊಂಡು ಸಹಕಾರ ಸಚಿವರು ಸೋಮವಾರದಂದು ಉತ್ತರವನ್ನು ಕೊಡುತ್ತಾರೆಂದು ತಿಳಿಸಲಿಚ್ಛಿಸುತ್ತೇನೆ.